ಲೋಕ ಸೇವಾ ಆಯೋಗ ಮತ್ತು ನೇಮಕಾತಿ ಸಮಿತಿಗಳಿಂದ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ

೬೨೩. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನವರಿ ೧೯೮೫ ರಿಂದ ಜನವರಿ ೧೯೮೬ರ ವರೆಗೆ ಲೋಕಸೇವಾ ಆಯೋಗ ಮತ್ತು ನೇಮಕಾತಿ ಸಮಿತಿಗಳಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇಮಕಗೊಂಡ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

ಆ) ನೇಮಕಾತಿಯ ಯಾವುದೇ ಹಂತದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಗಳ ನೇಮಕ ಮಾಡಲು ದೊರಕದ ಪ್ರಕರಣಗಳಿವೆಯೇ ?

ಇ) ಹಾಗಿದ್ದರೆ, ಅಂತಹ ಪ್ರಕರಣಗಳ ಸಂಖ್ಯೆ ಎಷ್ಟು ?

ಈ) ಮುಂದೊಯ್ಯುವ ವಿಧಾನವನ್ನು ಅನುಸರಿಸಿರುವ ಪ್ರಕರಣಗಳೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಜನವರಿ ೧೯೮೫ ರಿಂದ ಜನವರಿ ೧೯೮೬ರ ವರೆಗೆ ಲೋಕ ಸೇವಾ ಆಯೋಗ ಮತ್ತು ೨೯ ನೇಮಕಾತಿ ಸಮಿತಿಗಳಿಂದ ಬಂದಿರುವ ಮಾಹಿತಿಯಂತೆ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ ಈ ಕೆಳಗಿನಂತಿದೆ.—

ಅ) ಲೋಕ ಸೇವಾ ಆಯೋಗದಿಂದ	೫೩೫
೨೯ ಆಯ್ಕೆ ಸಮಿತಿಗಳಿಂದ	೭೯೦೫
೨೩ ಆಯ್ಕೆ ಸಮಿತಿಗಳಿಂದ ೧-೧೦-೧೯೮೫ರ ವರೆಗಿನ ಮಾಹಿತಿ ಬಂದಿದೆ. ಆ ಪ್ರಕಾರ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ	೭೭೮೦

ಇನ್ನುಳಿದ ೬ ಆಯ್ಕೆ ಸಮಿತಿಗಳಿಂದ ಮಾಹಿತಿ ಬರಬೇಕಾಗಿದೆ.

ಆ) ಹೌದು

ಇ) ೫೩

ಈ) ಪರಿಶಿಷ್ಟ ಜಾತಿಗೆ ಕಡಿಮೆ ಬಿದ್ದ ಹುದ್ದೆಗಳನ್ನು ಮುಂದೊಯ್ದು ಮುಂದಿನ ಆಯ್ಕೆ ಸಮಯದಲ್ಲಿ ಸರಿಪಡಿಸಲಾಗುವುದು. ಈ ರೀತಿ ಮುಂದೊಯ್ಯುವ ವಿಧಾನವನ್ನು ಎಲ್ಲಾ ೫೩ ಪ್ರಕರಣಗಳಲ್ಲೂ ಸರಕಾರದ ಆದೇಶದ ಪ್ರಕಾರ ಮಾಡಲಾಗುವುದು.

ಜಾಗೃತಾ ಆಯೋಗದ ಬಗ್ಗೆ

೬೨೭. ಶ್ರೀ ಎಸ್. ಕೆ. ಕಾಂತಾ (ಕುಂದಾಪುರ) — ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಜಾಗೃತಾ ಆಯೋಗದವರು, ಹಿಂದಿನ ಮೂರು ವರ್ಷದ ಅವಧಿಯಲ್ಲಿ ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ ಎಷ್ಟು ಅವುಗಳಲ್ಲಿ ಎಷ್ಟು ಪ್ರಕರಣಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ.

(ಆ) ಜಾಗೃತಾ ಇಲಾಖೆಯ ಒಟ್ಟು ಸಿಬ್ಬಂದಿಯ ಸಂಖ್ಯೆ ಹಾಗೂ ಕಳೆದ ಮೂರು ವರ್ಷಗಳಿಂದ ವೇತನ ಮತ್ತು ಇತರ ಭತ್ಯೆ ಸೇರಿ ತಗುಲಿದ ವೆಚ್ಚವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ) ಕಳೆದ ಮೂರು ವರ್ಷಗಳಲ್ಲಿ ಜಾಗೃತಾ ಆಯೋಗವು ತನಿಖೆ ನಡೆಸಿದ ಪ್ರಕರಣಗಳು ೫೧೨೭. ಇವುಗಳಲ್ಲಿ ಕ್ರಮ ತೆಗೆದುಕೊಂಡ ವಿವರಗಳು ಈ ಕೆಳಗಿನಂತೆ ಇವೆ—

ತನಿಖೆ ನಡೆಸಿದ ನಂತರ ಆರೋಪಣೆಗಳಲ್ಲಿ ಹುರುಳಿಲ್ಲವೆಂದು ಫೈಲ್ ಮಾಡಲಾದ ಪ್ರಕರಣಗಳು	೩೦೧೧
ತನಿಖೆ ನಡೆಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಕಳುಹಿಸಿದ ಪ್ರಕರಣಗಳು	೭೨೭
ತನಿಖೆ ನಡೆಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸಿನೊಂದಿಗೆ ಇಲಾಖಾ ಮುಖ್ಯಸ್ಥರಿಗೆ ಕಳುಹಿಸಿದ ಪ್ರಕರಣಗಳು	೬೬೦
ತನಿಖೆ ನಡೆಸಿದ ನಂತರ ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಲಾದ ಪ್ರಕರಣಗಳು	೧೨೦
ಇನ್ನೂ ತನಿಖೆಯಲ್ಲಿರುವ ಪ್ರಕರಣಗಳು	೬೦೯
ಒಟ್ಟು	೫೧೨೭

(ಆ) ಒಟ್ಟು ಸಿಬ್ಬಂದಿ ಸಂಖ್ಯೆ : ೪೨೬

ವೇತನ ಮತ್ತು ಇತರ ಭತ್ಯೆ ಸೇರಿ ತಗಲಿದ ವೆಚ್ಚ ರೂ. ೧,೮೯,೪೨೯–೦೦

ಶ್ರೀ ಎಸ್. ಕೆ. ಕಾಂತಾ.—ಈ ವಿವರಣೆಯನ್ನು ನೋಡಿದರೆ, ಜಾಗೃತ ಆಯೋಗದವರು ಯಾವ ರೀತಿ ಕೆಲಸಮಾಡುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಸುಮಾರು ಅರ್ಧಕ್ಕಿಂತಲೂ ಹೆಚ್ಚು ಕೇಸುಗಳು ಕಂಡೆಮ್ ಆಗಿವೆ. ಅವರಿಗೆ ೨ ಕೋಟಿ ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದಾರೆ. ಇದರರ್ಥವೇನೆಂದರೆ, ಅವರಿಂದ ಪರಿಣಾಮಕಾರಿಯಾಗಿ ಕೆಲಸಗಳಾಗುತ್ತಿಲ್ಲ. ಈಗ, ಜಾಗೃತ ಆಯೋಗದವರು ಯಾವುದಾದರೂ ಕಛೇರಿ ಮೇಲೆ ಎಂದರೆ, ಫುಡ್ ಆಂಡ್ ಸಿವಿಲ್ ಸಪ್ಲೈಸ್, ಸಬ್ ರಿಜಿಸ್ಟ್ರಾರ್ ಕಛೇರಿ ರೆವಿನ್ಯೂ ಇಲಾಖೆ, ಸಿಟಿ ಓ ಕಛೇರಿ ಇಂಥ ಕಡೆಗಳಿಗೆ ರೈಡ್ ಮಾಡತಕ್ಕದ್ದು ಇದೆಯೋ ಇಲ್ಲವೊ ?

ಶ್ರೀ ರಾಮಕೃಷ್ಣ ಹೆಗಡೆ.—ಆಫೀಸ್ ರೈಡ್ ಮಾಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಜಾಗೃತ ಆಯೋಗಕ್ಕೆ ಒಬ್ಬ ಸರ್ಕಾರಿ ಅಧಿಕಾರಿ ಲಂಚ ತೆಗೆದುಕೊಳ್ಳುತ್ತಿದ್ದಾನೆ ಎಂಬ ಸುದ್ದಿ ಏನಾದರೂ ಬಂದರೆ, ಅಂಥ ಸಂದರ್ಭದಲ್ಲಿ ಅವರಿಂದ ಹಿಡಿಸುವಂತಹ ಕ್ರಮವಿದೆ. ಆದರೆ, ಮಾನ್ಯ ಸದಸ್ಯರು ಒಟ್ಟು ಕೇಸುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಫೈಲ್ ಮಾಡಿಲ್ಲವೆಂದರು. ಒಂದೊಂದು ಸಲ ಹೀಗೆ ಆಗುತ್ತದೆ. ಆದರೆ, ಊಹಾಪೋಹ, ಹಾಗೂ ಅನಾಮಧೇಯ ಪತ್ರಗಳಿಂದ ಕ್ರಮ ತೆಗೆದುಕೊಂಡು, ತನಿಖೆ ಮಾಡಿ ನೋಡಿದಾಗ ಸತ್ಯ ಎಂದು ತಿಳಿದುಬಂದರೆ, ನಾವೇನೂ ಮಾಡುವುದಕ್ಕಾಗುವುದಿಲ್ಲ.

ಯಾದಗಿರಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು.

೬೮೬. ಶ್ರೀ ಮಲ್ಲಿಕಾರ್ಜುನ ಖರ್ಗೆ(ಗುರುಮಿಠ್‌ಕಲ್).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಯಾದಗಿರಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಇಲಾಖೆ ಮತಿಯಿಂದ ಅಥವಾ ಕಂಟ್ರಾಕ್ಟರ್ ಮೂಲಕ ಕಾರ್ಯಗತಗೊಳಿಸಿದೆಯೇ?

(ಆ) ಕಂಟ್ರಾಕ್ಟರುಗಳಿಂದ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ ಪಕ್ಷದಲ್ಲಿ ಕಂಟ್ರಾಕ್ಟರ ಹೆಸರು ಅವರಿಗೆ ಒಪ್ಪಿಸಿಕೊಟ್ಟ ಕಾಮಗಾರಿಯ ಹೆಸರು ಮತ್ತು ಅವರ ರಿಜಿಸ್ಟ್ರೇಷನ್ ಸಂಖ್ಯೆಯನ್ನು ತಿಳಿಸಿ

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಇಲಾಖೆಯ ಮೂಲಕ ಹಾಗೂ ಕಂಟ್ರಾಕ್ಟರುಗಳ ಮೂಲಕ ಕಾಮಗಾರಿಗಳನ್ನು ಕಾರ್ಯಗೊಳಿಸಲಾಗಿದೆ.

(ಆ) ಪಟ್ಟಿಯನ್ನು ಲಗತ್ತಿಸಲಾಗಿದೆ.